148

ಚಾಣಕ್ಯ ಶತಕ

(ಭಾಗ ೧)

ಕನ್ನಡ ಅರ್ಥ ಸಹಿತ

ಅನುವಾದಕರು:

ಡಾ। ಟಿ. ಪಿ. ಭಟ್,

ಮಂಗಳೂರು.

1957.

ಒಂದಾಣೆ ಮಾಲೆ

ಇಪ್ಪತ್ತೊಂಭತ್ತು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಮೂವತ್ತು
ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು(ಇಪ್ಪತ್ತೊಂಭತ್ತು)ದೊರೆವವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಚಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ಡಾ| ಎಮ್. ಎನ್. ಕಾಮತ್
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ| ಪಿ ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ| ಬಿ. ದಾಮೋದರ ಬಾಳಿಗ, ಬಿ ಎ
೭	ಮೀರಾಬಾಯಿ (ಐತಿಹಾಸಿಕ)	ಶ್ರೀ| ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ| ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ| ಕೆ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ| ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ| ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ| ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ| ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ| ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ| ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತ ಕುಚೇಲ (ಪೌರಾಣಿಕ)	ಶ್ರೀ| ಅಂಬಾತನಯ.
೧೭	ಮದ್ವ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ| ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ| ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ| ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ–ಲವ ,,	ಶ್ರೀ| ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ
೨೫	ವೈರಾಗ್ಯನಿಧಿ (ತರಂಗರೂಪಕ)	ಶ್ರೀ| ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ(ಪೌರಾಣಿಕ)	ಶ್ರೀ| ಅಮ್ಮೆಂಬಳ ಅನಂತಯ್ಯ ನಾವಡ.
೨೭.	ಮಹಾತ್ಮಾ ಉದಂಕ	ಶ್ರೀ| ಮಣಿಲ 'ಶಿವಶಂಕರ', ಪುಣಚಾ·
೨೮.	ಭಕ್ತ ಪ್ರಹ್ಲಾದ (ಪೌರಾಣಿಕ)	ಶ್ರೀ| ಎ. ವಿ. ಮಯ್ಯ.
೨೯.	ಅಭಿಮನ್ಯು ,,	ಶ್ರೀ| ಬಿ. ಈಶ್ವರಯ್ಯ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

ಪ್ರಸ್ತಾವನೆ

ಚಣಕಮುನಿಪುತ್ರನಾದ ವಿಷ್ಣುಗುಪ್ತಶರ್ಮನೆ ಚಾಣಕ್ಯನೆಂದು ಪ್ರಸಿದ್ಧನು. ಚಾಣಕ್ಯನು ಆದಿ ಎರಡು ಪುರುಷಾರ್ಥಗಳಾದ ಧರ್ಮ ಮತ್ತು ಅರ್ಥಗಳಲ್ಲಿ ಅದ್ವಿತೀಯ ಪಂಡಿತನಾಗಿದ್ದನು. ಕಪಟಾಚರಣೆಯೇ ಪುರುಷಾರ್ಥವಾಗಿದ್ದ ನಂದರನ್ನು ತನ್ನ ಅದ್ವಿತೀಯ ನೀತಿಶಾಸ್ತ್ರನೈಪುಣ್ಯದಿಂದ ಧ್ವಂಸಮಾಡಿ ಮೌರ್ಯ ಚಂದ್ರಗುಪ್ತನಿಗೆ ಸಾಮ್ರಾಜ್ಯ ಪಟ್ಟಕಟ್ಟಿದ ಚಾರಿತ್ರಿಕ ಕಥೆಯನ್ನು ಮುದ್ರಾಮಂಜೂಷವು ವಿವರಿಸುತ್ತದೆ. ಈ ಗ್ರಂಥವು ನೀತಿಶಾಸ್ತ್ರದ ವ್ಯಾಖ್ಯಾನದಂತಿದೆ.

ಚಾಣಕ್ಯನು ರಚಿಸಿದ ಅರ್ಥಶಾಸ್ತ್ರವು 'ಕೌಟಿಲ್ಯ ಅರ್ಥಶಾಸ್ತ್ರ' ಎಂದು ಜಗತ್ಪ್ರಸಿದ್ಧವಾಗಿದೆ. ಚಾಣಕ್ಯನು ಉಪದೇಶಿಸಿದ ನೀತಿಶಾಸ್ತ್ರವು ಅದ್ವಿತೀಯವಾಗಿದೆ. ಆದರೆ ಅದು ಇನ್ನೂ ದೊರೆತಿರುವುದಿಲ್ಲ. 'ಚಾಣಕ್ಯಶತಕ' ಎಂಬ ಗ್ರಂಥವು ಮಾತ್ರ ಪ್ರಕಟವಾಗಿದೆ. ಇವುಗಳನೇಕ ಶ್ಲೋಕಗಳು ನಾಣ್ನುಡಿಯಂತೆ ಬಲು ಜನರ ಬಾಯಲ್ಲಿ ನಲಿದಾಡುತ್ತಿವೆ. ಇದರ ಶ್ಲೋಕಗಳು ಬಹು ಸುಲಭವಾಗಿವೆ. ಅಲ್ಲದೆ ಧರ್ಮದ ಮರ್ಮವನ್ನು ಇವು ಬಹು ಮನೋಜ್ಞವಾಗಿ ಬೋಧಿಸುತ್ತವೆ. ಆದರೆ ಇವು ಎಷ್ಟರ ಮಟ್ಟಿಗೆ ಚಾಣಕ್ಯಕೃತ ಎಂದು ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ.

ಈ ಚಾಣಕ್ಯ ಶತಕದ ಶ್ಲೋಕಗಳನ್ನು ಆಬಾಲವೃದ್ಧರು ಕಂಠಪಾಠ ಮಾಡುವುದು ಅಗತ್ಯವು. ಇದನ್ನು ಮನಗಂಡು ಡಾಕ್ಟರ್ ಟಿ. ಪಿ. ಭಟ್ಟರು ಇವುಗಳಿಗೆ ಸರಳ ಭಾವಾರ್ಥವನ್ನು ಕನ್ನಡದಲ್ಲಿ ರಚಿಸಿರುವುದು ಸ್ತುತ್ಯವು. 'ಒಂದಾಣೆ ಮಾಲೆ'ಯಲ್ಲಿ ಎರಡು ಭಾಗವಾಗಿ ಚಾಣಕ್ಯ ಶತಕವು ಪ್ರಕಾಶಿಸಲ್ಪಡುವುದು ಕನ್ನಡಿಗರ ಸೌಭಾಗ್ಯವು.

ಮಂಗಳೂರು,
21—7—1957.

ಕೋ. ಶ. ಕಾರಂತ.

ಚಾಣಕ್ಯ ಶತಕ

ಶ್ರೀ

(ಕನ್ನಡ ಅರ್ಥ ಸಹಿತ; ಭಾಗ ೧)

ನಾನಾ ಶಾಸ್ತ್ರೋದ್ಧೃತಂ ವಕ್ಷ್ಯೇ ರಾಜನೀತಿ ಸಮುಚ್ಚಯಂ ।
ಸರ್ವಬೀಜಮಿದಂ ಶಾಸ್ತ್ರಂ ಚಾಣಕ್ಯಂ ಸಾರಸಂಗ್ರಹಂ ॥ ೧ ॥

ಚಾಣಕ್ಯರಿಂದ ಪ್ರಣೀತವಾದುದನ್ನು ವಿವಿಧ ಶಾಸ್ತ್ರಗಳಿಂದ ಉದ್ಧೃತವಾದ, ರಾಜನೀತಿ ಶಾಸ್ತ್ರಗಳ ಸಂಗ್ರಹವನ್ನು (ಎಲ್ಲ ಶಾಸ್ತ್ರಗಳ ನಿದಾನವನ್ನು) ಹೇಳುತ್ತೇನೆ. ॥ ೧ ॥

ಮೂಲ ಸೂತ್ರಂ ಪ್ರವಕ್ಷ್ಯಾಮಿ ಚಾಣಕ್ಯೇನ ಯಥೋದಿತಂ ।
ಯಸ್ಯ ವಿಜ್ಞಾನ ಮಾತ್ರೇಣ ಮೂರ್ಖೋ ಭವತಿ ಪಂಡಿತಃ ॥ ೨ ॥

ಯಾವುದನ್ನು ತಿಳಿಯುವುದರಿಂದ ಮೂರ್ಖನು ಪ್ರಾಜ್ಞನಾಗುವನೋ, ಚಾಣಕ್ಯನಿಂದ ಹೇಳಲ್ಪಟ್ಟ ಅಂತಹ ಮೂಲಸೂತ್ರವನ್ನು ಯಥೋಚಿತವಾಗಿ ಹೇಳುತ್ತೇನೆ. ॥ ೨ ॥

ವಿದ್ವತ್ವಂಚ ನೃಪತ್ವಂಚ ನೈವ ತುಲ್ಯಂ ಕದಾಚನ ।
ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ॥ ೩ ॥

ಪಾಂಡಿತ್ಯವೂ ರಾಜತ್ವವೂ ಯಾವಾಗಲೂ ಸಮತೋಲವಲ್ಲ. ಏಕೆಂದರೆ, ಅರಸನು ತನ್ನ ದೇಶದಲ್ಲಿ ಮಾತ್ರ ಗೌರವಿಸಲ್ಪಡುತ್ತಾನೆ; ಆದರೆ ಪಂಡಿತನು ಎಲ್ಲೆಡೆಗಳಲ್ಲಿಯೂ ಗೌರವಿಸಲ್ಪಡುತ್ತಾನೆ. ॥ ೩ ॥

ಪಂಡಿತೇ ಚ ಗುಣಾಃ ಸರ್ವೇ ಮೂರ್ಖೇ ದೋಷಾಹಿ ಕೇವಲಂ ।
ತಸ್ಮಾನ್ಮೂರ್ಖ ಸಹಸ್ರೇಷು ಪ್ರಾಜ್ಞ ಏಕೋ ವಿಶಿಷ್ಯತೇ ॥ ೪ ॥

ಪಂಡಿತನಲ್ಲಿ ದಯಾದಾಕ್ಷಿಣ್ಯಾದಿ ಎಲ್ಲ ಗುಣಗಳೂ ಇವೆ. ಆದರೆ, ಮೂರ್ಖನಲ್ಲಿ ಕೇವಲ ಪರಹಿಂಸಾದಿ ದೋಷಗಳೇ ಇವೆ. ಆದುದರಿಂದ

ಸಾವಿರ ಮೂರ್ಖರಲ್ಲಿ ಒಬ್ಬ ವಿದ್ವಾಂಸನು ವಿಶೇಷವಾಗಿ ಆದರಿಸಲ್ಪಡುವನು. ॥ ೪ ॥

ಮಾತೃವತ್ ಪರದಾರೇಷು ಪರದ್ರವ್ಯೇಷು ಲೋಷ್ಟ್ರವತ್ ।
ಆತ್ಮವತ್ ಸರ್ವ ಭೂತೇಷು ಯಃ ಪಶ್ಯತಿ ಸ ಪಂಡಿತಃ ॥ ೫ ॥

ಯಾವನು ಪರಸ್ತ್ರೀಯನ್ನು ತನ್ನ ತಾಯಿಯಂತೆ, ಪರಧನವನ್ನು ಜಡ ಪಿಂಡದಂತೆ ಎಲ್ಲ ಪ್ರಾಣಿಗಳನ್ನೂ ತನ್ನಂತೆ ವಿಚಾರಿಸುತ್ತಾನೋ ಅವನೇ ವಿದ್ವಾಂಸನು. ॥ ೫ ॥

ಕಿಂ ಕುಲೇಣ ವಿಶಾಲೇನ ಗುಣಹೀನಸ್ತು ಯೋ ನರಃ ।
ಅಕುಲಿನೋಽಪಿ ಶಾಸ್ತ್ರಜ್ಞೋ ದೈವತೈರಪಿ ಪೂಜ್ಯತೇ ॥ ೬ ॥

ಯಾವನು ಗುಣಹೀನನೋ (ಅವಿದ್ಯಾವಂತನೋ) ಅವನ ವಿಶಾಲ ವಂಶದಿಂದೇನು ಪ್ರಯೋಜನ? (ಯಾವ ಪ್ರಯೋಜನವೂ ಇಲ್ಲವೆಂದರ್ಥ) ಅಕುಲೀನನು (ನೀಚಕುಲೋತ್ಪನ್ನನು) ಶಾಸ್ತ್ರಜ್ಞನಾದರೆ ದೇವತೆಯರಿಂದಲೂ ಆದರಿಸಲ್ಪಡುತ್ತಾನೆ. ॥ ೬ ॥

ರೂಪಯೌವನ ಸಂಪನ್ನಾ ವಿಶಾಲಕುಲ ಸಂಭವಾ ।
ವಿದ್ಯಾಹೀನಾ ನ ಶೋಭಂತೇ ನಿರ್ಗಂಧಾ ಇವ ಕಿಂಶುಕಾಃ ॥ ೭ ॥

ಸೌಂದರ್ಯದಿಂದಲೂ ಯೌವನದಿಂದಲೂ ಯುಕ್ತರು ಮಹಾಕುಲೀನರೂ ವಿದ್ಯಾವಿಹೀನರಾದರೆ ಪರಿಮಳವಿಲ್ಲದ ಪಲಾಶ (ಶಾಲ್ಮಲೀ) ಪುಷ್ಪಗಳಂತೆ ಸ್ವಲ್ಪವೂ ಶೋಭಿಸುವುದಿಲ್ಲ. (ಯಾರಿಂದಲೂ ಆದರಿಸಲ್ಪಡುವುದಿಲ್ಲ.) ॥ ೭ ॥

ನಕ್ಷತ್ರ ಭೂಷಣಂ ಚಂದ್ರೋ ನಾರೀಣಾಂ ಭೂಷಣಂ ಪತಿಃ ।
ಪೃಥಿವೀ ಭೂಷಣಂ ರಾಜಾ ವಿದ್ಯಾ ಸರ್ವಸ್ಯ ಭೂಷಣಂ ॥ ೮ ॥

ಚಂದ್ರನು ನಕ್ಷತ್ರಗಳಿಗೆ ಅಲಂಕಾರ (ಚಂದ್ರನಿಂದ ನಕ್ಷತ್ರಗಳು ಅಲಂಕರಿಸಲ್ಪಡುತ್ತವೆ.) ಪತಿಯು ಸ್ತ್ರೀಯ ಅಲಂಕಾರ. (ಪತಿವಿನಹ ಸ್ತ್ರೀಯು ಶೋಭಿಸುವುದೂ ಇಲ್ಲ, ಗತಶ್ರೀಯೂ ಆಗಿರುತ್ತಾಳೆ, ಎಂಬ

ಭಾವ.) ಅರಸರು ಭೂದೇವಿಗೆ ಭೂಷಣಪ್ರಾಯರು. ಹಾಗೆಯೇ ವಿದ್ಯೆಯು ಸರ್ವಜನರಿಗೂ ಅಲಂಕಾರವು ಆಗಿರುತ್ತದೆ. ॥ ೮ ॥

ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ ।
ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥ ೯ ॥

ಪುತ್ರನು ಅಶಿಕ್ಷಿತನಾದರೆ ಜನನಿಯು ಶತ್ರುವೂ ತಂದೆಯು ವೈರಿಯೂ ಆಗಿರುತ್ತಾರೆ. ಏಕೆಂದರೆ, ಹಂಸಗಳ ಮಧ್ಯದಲ್ಲಿ ಬಕಪಕ್ಷಿಯು ಹೇಗೆ ಶೋಭಿಸುವುದಿಲ್ಲವೋ, ಹಾಗೆಯೇ ಆ ಹುಡುಗನು ಸಭಾಮಧ್ಯದಲ್ಲಿ ಶೋಭಿಸುವುದಿಲ್ಲ. ॥ ೯ ॥

ವರಮೇಕೋ ಗುಣೀ ಪುತ್ರೋ ನಚ ಮೂರ್ಖ ಶತೈರಪಿ ।
ಏಕಶ್ಚಂದ್ರಸ್ತಮೋ ಹಂತಿ ನ ಚ ತಾರಾಗಣೋಪಿ ಚ ॥ ೧೦ ॥

ಒಬ್ಬನೇ ಗುಣವಂತ ಪುತ್ರನು ಶ್ರೇಷ್ಠನು. ನೂರು ಮೂರ್ಖ ಮಕ್ಕಳಿಂದ ಏನೂ ಪ್ರಯೋಜನವಿಲ್ಲ. ಅದ್ವಿತೀಯನಾದ ಚಂದ್ರನು ಕತ್ತಲನ್ನು ಹೋಗಲಾಡಿಸುವನು; ನಕ್ಷತ್ರ ಸಮೂಹಗಳು ತಮಸ್ಸನ್ನು ಹೋಗಲಾಡಿಸವು. ॥ ೧೦ ॥

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ।
ಪ್ರಾಪ್ತೇತು ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್ ॥ ೧೧ ॥

ಐದು ವರ್ಷ ಪ್ರಾಯದ ವರೆಗೆ ಪುತ್ರನನ್ನು ಲಾಲಿಸಬೇಕು; ಅನಂತರ ಹತ್ತು ವರ್ಷಗಳ ವರೆಗೆ ಶಿಕ್ಷಿಸಬೇಕು; ಹದಿನಾರನೇ ವರ್ಷಕ್ಕೆ ಕಾಲಿಟ್ಟಾಗ ಮಿತ್ರನಂತೆ ವ್ಯವಹರಿಸಬೇಕು. ॥ ೧೧ ॥

ಲಾಲನೇ ಬಹವೋ ದೋಷಾಸ್ತಾಡನೇ ಬಹವೋ ಗುಣಾಃ ।
ತಸ್ಮಾತ್ ಪುತ್ರಂಚ ಶಿಷ್ಯಂಚ ತಾಡಯೇನ್ನತು ಲಾಲಯೇತ್ ॥ ೧೨ ॥

ಮಕ್ಕಳನ್ನು ಲಾಲನೆಮಾಡುವುದರಿಂದ ಬಹು ದೋಷಗಳು ಸಂಭವಿಸುತ್ತವೆ. ಆದರೆ ಮಕ್ಕಳನ್ನು ಶಿಕ್ಷಿಸುವುದರಿಂದ ವಿನಯಾದಿ ಬಹು ಗುಣಗಳು ಪ್ರಾಪ್ತವಾಗುತ್ತವೆ. ಆದುದರಿಂದ ಪುತ್ರರನ್ನು ಮತ್ತು ಶಿಷ್ಯರನ್ನು ಶಿಕ್ಷಿಸಬೇಕಲ್ಲದೆ ಲಾಲನೆಮಾಡಬಾರದು. ॥ ೧೨ ॥

ಏಕೇನಾಪಿ ಸುವೃಕ್ಷೇಣ ಪುಷ್ಪಿತೇನ ಸುಗಂಧಿನಾ ।
ವಾಸಿತಂ ತದ್ವನಂ ಸರ್ವಂ ಸುಪುತ್ರೇಣ ಕುಲಂ ಯಥಾ ॥ ೧೩ ॥

ಒಳ್ಳೆಯ ಮರದಿಂದ ಬಿಡಲ್ಪಟ್ಟ ಸುಗಂಧಪೂರಿತವಾದ ಒಂದೇ ಒಂದಾದ ಪುಷ್ಪದಿಂದ ಇಡೀ ವನವು ಸುಗಂಧಪೂರಿತವಾದಂತೆ ಸುಪುತ್ರನೋರ್ವನಿಂದ ಕುಲವು ಉದ್ಧಾರವಾಗುತ್ತದೆ. ॥ ೧೩ ॥

ಏಕೇನಾಪಿ ಕುವೃಕ್ಷೇಣ ಕೋಟರಸ್ಥೇನ ವಹ್ನಿನಾ ।
ದಹ್ಯತೇ ತದ್ವನಂ ಸರ್ವಂ ಕುಪುತ್ರೇಣ ಕುಲಂ ಯಥಾ ॥ ೧೪ ॥

ಒಂದು ಹಾಳಾದ ಮರದ ಟೊಳ್ಳಿನಲ್ಲಿರುವ ಬೆಂಕಿಯಿಂದ ಇಡೀ ವನವು ಸುಡಲ್ಪಡುವಂತೆ, ಒಬ್ಬ ಮೂರ್ಖಪುತ್ರನಿಂದ ಸಮಗ್ರ ಕುಲವು ನಾಶವಾಗುತ್ತದೆ. ॥ ೧೫ ॥

ದೂರತಃ ಶೋಭತೇ ಮೂರ್ಖೋ ಲಂಬಶಾಟಪಟಾವೃತಃ ।
ತಾವಚ್ಚ ಶೋಭತೇ ಮೂರ್ಖೋ ಯಾವತ್ ಕಿಂಚಿನ್ನ ಭಾಷತೇ ॥ ೧೫ ॥

ದೊಡ್ಡ ಧೋತ್ರವನ್ನು ಹೊದ್ದುಕೊಂಡು'ದೂರದಲ್ಲಿರುವ ಮೂರ್ಖನು ಶೋಭಿಸುತ್ತಾನೆ. ಎಷ್ಟರ ವರೆಗೆ ಅವನು ಮಾತನಾಡುವುದಿಲ್ಲವೋ, ಅಷ್ಟರ ವರೆಗೆ ಮಾತ್ರ ಅವನು ಶೋಭಿಸುತ್ತಾನೆ. ಎಂದರೆ ಮಾತನಾಡಲಿಕ್ಕೆ ಆರಂಭಿಸಿದರೆ ಅವನ ಮೂರ್ಖತನವು ಬಯಲಾಗುತ್ತದೆ. ॥ ೧೫ ॥

ವಿಷಾದಪ್ಯಮೃತಂ ಗ್ರಾಹ್ಯಂ ಅಮೇಧ್ಯಾದಪಿ ಕಾಂಚನಂ ।
ನೀಚಾದಪ್ಯುತ್ತಮಾಂ ವಿದ್ಯಾಂ ಸ್ತ್ರೀರತ್ನಂ ದುಷ್ಕುಲಾದಪಿ ॥ ೧೬ ॥

ವಿಷಮಿಶ್ರಿತವಾದ ಅಮೃತವು ಗ್ರಹಣೀಯು; ಅಮೇಧ್ಯದಲ್ಲಿರುವ ಬಂಗಾರವು ಗ್ರಾಹ್ಯವು; ಹಾಗೆಯೇ ಉತ್ತಮ ವಿದ್ಯೆಯು ನೀಚ ಜಾತಿಯವನಿಂದಲಾದರೂ ಗ್ರಾಹ್ಯವು; ರತ್ನದಂಥ ಗುಣವತಿ ಸ್ತ್ರೀಯು ನೀಚಕುಲದವಳಾದರೂ ಪರಿಗ್ರಹಿಸಲು ಯೋಗ್ಯಳಾಗಿರುತ್ತಾಳೆ. ॥ ೧೬ ॥

ಉತ್ಸವೇ ವ್ಯಸನೇ ಚೈವ ದುರ್ಭಿಕ್ಷೇ ಶತ್ರುವಿಗ್ರಹೇ ।
ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾಂಧವಃ ॥ ೧೭ ॥

ವೈಭವಕಾಲದಲ್ಲಿ, ವಿಪತ್ತಿನಲ್ಲಿ, ದುರ್ಭಿಕ್ಷಕಾಲದಲ್ಲಿಯೂ ಶತ್ರು

ವಿರೋಧಿಸುತ್ತಿರುವಾಗ, ಅರಮನೆಯುಲ್ಲೂ ಶವದಹನದಲ್ಲೂ ಯಾವನು ಸಹಾಯುವಮಾಡುವವನೋ ಅವನೇ ಬಂಧುವು. ‖ ೧೭ ‖

ಪರೋಕ್ಷೇ ಕಾರ್ಯಹಂತಾರಂ ಪ್ರತ್ಯಕ್ಷೇ ಪ್ರಿಯವಾದಿನಮ್ ।
ವರ್ಜಯೇತ್ತಾದೃಶಂ ಮಿತ್ರ ವಿಷಕುಂಭಂ ಪಯೋಮುಖಂ ‖ ೧೮ ‖

ಗೋಪ್ಯವಾಗಿ ವಿರೋಧವನ್ನು ಬಗೆಯುವ, ಸಮಕ್ಷಮದಲ್ಲಿ ಪ್ರಿಯವಾಗಿ ಮಾತನಾಡುವ ಮಿತ್ರನನ್ನು ವರ್ಜಿಸಬೇಕು. ಏಕೆಂದರೆ ಅಂಥ ಮಿತ್ರನು ಮೇಲ್ಭಾಗದಲ್ಲಿ ಹಾಲಿನಂತೆ ತೋರಿದರೂ ವಿಷತುಂಬಿದ ಕುಂಭದಂತಿರುವನು. ‖ ೧೮ ‖

ಸಕೃದ್ ದುಷ್ಟಂ ಚ ಮಿತ್ರಂ ಯಃ ಸಂಧಾತುಮಿಚ್ಛತಿ ।
ಸ ಮೃತ್ಯುಮುಪಗೃಹ್ಣಾತಿ ಗರ್ಭಮಶ್ವತರೀ ಯಥಾ ‖ ೧೯ ‖

ಕುದುರೆಯಲ್ಲಿ ಕತ್ತೆಯ ಗರ್ಭವು ಹೇಗೆ ನಿಲ್ಲುವುದಿಲ್ಲವೋ ಹಾಗೆಯೇ ಒಂದು ಬಾರಿ ದುಷ್ಟನಾದ (ವಿರುದ್ಧನಾದ ಎಂಬರ್ಥ) ಮಿತ್ರನನ್ನು ಪುನಃ ಪ್ರೀತಿಯಿಂದ ಯಾರು ಗ್ರಹಿಸುವನೋ ಅವನು ಮೃತ್ಯುವನ್ನೇ ಆಶ್ರಯಿಸುತ್ತಾನೆ. ‖ ೧೯ ‖

ನ ವಿಶ್ವಸೇದವಿಶ್ವಸ್ತಂ ಮಿತ್ರಂ ಚಾಪಿ ನ ವಿಶ್ವಸೇತ್ ।
ಕದಾಚಿತ್ ಕುಪಿತಂ ಮಿತ್ರಂ ಸರ್ವದೋಷಂ ಪ್ರಕಾಶಯೇತ್ ‖ ೨೦ ‖

ವಿಶ್ವಾಸಕ್ಕೆ ಯೋಗ್ಯನಲ್ಲದವನು ಮಿತ್ರನಾದರೂ ಅವನನ್ನು ನಂಬಬಾರದು; ಕೋಪಗೊಂಡ ಮಿತ್ರನಿಗಾದರೂ ಯಾವಾಗಲಾದರೂ ಎಲ್ಲ ದೋಷಗಳನ್ನು ತಿಳಿಸತಕ್ಕದ್ದು. ‖ ೨೦ ‖

ಜಾನೀಯಾತ್ ಪ್ರೇಷಣೇ ಭೃತ್ಯಾನ್ ಬಾಂಧವಾನ್ ವ್ಯಸನಾಗಮೇ ।
ಮಿತ್ರಂಚಾಪದಿ ಕಾಲೇ ಚ ಭಾರ್ಯಾಂಚ ವಿಭವಕ್ಷಯೇ ‖ ೨೧ ‖

ಸೇವಕರ ನಿಜಶೀಲವನ್ನು ಅವರ ಸೇವಾಕಾರ್ಯಗಳಿಂದ ತಿಳಿಯಬಹುದು. ಬಾಂಧವರನ್ನು (ಭ್ರಾತೃಗಳನ್ನು) ರೋಗಾದಿಗಳು ಪ್ರಾಪ್ತಿಯಾದಾಗ ಅರಿತುಕೊಳ್ಳಬಹುದು; ಮಿತ್ರನನ್ನು ಆಪತ್ತಿನಲ್ಲಿಯೇ ತಿಳಿಯು

ಬಹುದು; ಸಂಪತ್ತು ನಷ್ಟವಾದಾಗ ಹೆಂಡತಿಯು ಒಳ್ಳೆಯವಳೋ ಕೆಟ್ಟ ವಳೋ ಎಂದು ತಿಳಿಯಬಹುದು. ॥ ೨೧ ॥

ಉಪಕಾರಮೃಹೀತೇನ ಶತ್ರುಣಾ ಶತ್ರುಮುದ್ಧರೇತ್ ।
ಪಾದಲಗ್ನಂ ಕರಸ್ಥೇನ ಕಂಟಕೇನೇವ ಕಂಟಕಮ್ ॥ ೨೨ ॥

ಉಪಕಾರಮಾಡಿ ವಶೀಕರಿಸಲ್ಪಟ್ಟ ಶತ್ರುವಿನಿಂದ ಬೇರೆ ಶತ್ರುವನ್ನು ಕೈಯಲ್ಲಿ ಹಿಡಿದ ಮುಳ್ಳಿನಿಂದ ಕಾಲಿಗೆ ತಾಗಿದ ಮುಳ್ಳನ್ನು ಕೀಳುವಂತೆ ನಿವಾರಿಸಬೇಕು. ॥ ೨೨ ॥

ನ ಕಶ್ಚಿತ್ ಕಸ್ಯಚಿನ್ಮಿತ್ರಂ ನ ಕಶ್ಚಿತ್ ಕಸ್ಯಚಿದ್ರಿಪುಃ ।
ಕಾರಣೇನ ಹಿ ಜಾನಾತಿ ಮಿತ್ರಾಣಿ ಚ ರಿಪೂಂಸ್ತಥಾ ॥ ೨೩ ॥

ಯಾರೊಬ್ಬನೂ ಯಾರೊಬ್ಬನ ಮಿತ್ರನಲ್ಲ, ಯಾರೊಬ್ಬನೂ ಯಾರೊಬ್ಬನು ಶತ್ರುವೂ ಅಲ್ಲ; ಮಿತ್ರನನ್ನೂ ಶತ್ರುಗಳನ್ನೂ ವ್ಯವಹಾರದಿಂದ ಒಬ್ಬನು ತಿಳಿಯುತ್ತಾನೆ. ॥ ೨೩ ॥

ದುರ್ಜನಃ ಪ್ರಿಯವಾದೀ ಚ ನೈತದ್ವಿಶ್ವಾಸಕಾರಣಂ ।
ಮಧು ತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಲಾಹಲಂ ॥ ೨೪ ॥

ಒಬ್ಬ ದುಷ್ಟನು ಪ್ರಿಯವಾಗಿ ಮಾತನಾಡಿದರೂ ಅವನನ್ನು ಆ ಕಾರಣ ದಿಂದ ವಿಶ್ವಾಸಿಸಲಾಗದು. ಆ ದುಷ್ಟನ ನಾಲಗೆಯ ತುದಿಯಲ್ಲಿ ಮಾತ್ರ ಜೇನಿದೆ, ಆದರೆ ಹೃದಯದಲ್ಲಿ (ಅಂತಃಕರಣದಲ್ಲಿ) ವಿಷ ತುಂಬಿದೆ. ॥ ೨೪ ॥

ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋಽಪಿ ಸಃ ।
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ ॥ ೨೫ ॥

ದುರ್ಜನನು ವಿದ್ಯಾಭೂಷಿತನಾದರೂ ತ್ಯಾಜ್ಯನು. (ಅವನ ಸಂ ಸರ್ಗವೇ ಕೂಡದೆಂಬ ಭಾವ). ಸರ್ಪವು ತಲೆಯಲ್ಲಿ ಅಮೂಲ್ಯ ರತ್ನ ದಿಂದ ಭೂಷಿತವಾಗಿದ್ದರೂ ಭಯಂಕರವೇ. ॥ ೨೫ ॥

ಸರ್ಪಃ ಕ್ರೂರಃ ಖಲಃ ಕ್ರೂರಃ ಸರ್ಪಾತ್ ಕ್ರೂರತರಃ ಖಲಃ ।
ಮಂತ್ರೌಷಧಿವಶಃ ಸರ್ಪಃ ಖಲಃ ಕೇನ ನಿವಾರ್ಯತೇ ॥ ೨೭ ॥

ಸರ್ಪವು ಕ್ರೂರ (ನಿಷ್ಠುರ), ದುರ್ಜನನೂ ನಿಷ್ಠುರನು. ಆದರೆ ದುರ್ಜನನು ಸರ್ಪಕ್ಕಿಂತಲೂ ಅತಿಶಯವಾಗಿ ಕ್ರೂರನು. ಏಕೆಂದರೆ ಮಂತ್ರೌಷಧಿಗಳಿಂದ ಸರ್ಪವನ್ನು ವಶೀಕರಿಸಬಹುದು. ಆದರೆ ದುಷ್ಟನನ್ನು ಯಾವ ಉಪಾಯದಿಂದಲೂ ನಿವಾರಿಸಲಾಗುವುದಿಲ್ಲ. ॥ ೨೬ ॥

ನಖೀನಾಂ ಚ ನದೀನಾಂ ಚ ಶೃಂಗಿನಾಂ ಶಸ್ತ್ರಪಾಣಿನಾಂ ।
ವಿಶ್ವಾಸೋ ನೈವ ಕರ್ತವ್ಯ- ಸ್ತ್ರೀಷು ರಾಜಕುಲೇಸು ಚ ॥ ೨೭ ॥

ನಖಾಯುಧವುಳ್ಳವುಗಳನ್ನು, ಸಿಂಹವ್ಯಾಘ್ರಾದಿಗಳನ್ನು, ನದಿಗಳನ್ನು, ಕೋಡುಗಳಿದ್ದವುಗಳನ್ನು, (ದನ ಎಮ್ಮೆ ಇತ್ಯಾದಿಗಳನ್ನು), ಅಸ್ತ್ರಧಾರಿಗಳನ್ನು, ಸ್ತ್ರೀಯರನ್ನು ಮತ್ತು ಹಾಗೆಯೇ ರಾಜಕುಲದವರನ್ನು ವಿಶ್ವಸಿಸಲೇ ಬಾರದು. (ನಖಗಳಿಂದ ಘಾಯಗೊಳಿಸಿ, ನದಿಯ ನೆರೆಯಿಂದ ಹಾವಳಿಯಾಗಿ, ಕೋಡುಗಳಿಂದ ಹಾಯಲ್ಪಟ್ಟು, ಶಸ್ತ್ರಧಾರಿಗಳ ಯುದ್ಧದಿಂದಾಗಿ, ಸ್ತ್ರೀಯರ ಚಾಪಲ್ಯದಿಂದಾಗಿ, ರಾಜಾದಿಗಳಿಂದ ಎಲ್ಲರಿಗೆ ಅಪಾಯವಿದ್ದೇ ಇದೆ ಎಂದರ್ಥ). ॥ ೨೭ ॥

ಹಸ್ತಿ ಹಸ್ತ ಸಹಸ್ರೇಣ ಶತಹಸ್ತೇನ ವಾಜಿನಃ ।
ಶೃಂಗಿಣೋ ದಶಹಸ್ತೇನ ಸ್ಥಾನತ್ಯಾಗೇನ ದುರ್ಜನಃ ॥ ೨೮ ॥

ಆನೆಯನ್ನು ಹೆಚ್ಚು ಜನರು ಸೇರಿ ಪರಿಹರಿಸಬಹುದು. ಕುದುರೆಯನ್ನು ಐವತ್ತು ಮಂದಿ ಕೂಡಿ ಪರಿಹರಿಸಬಹುದು. ದನ, ಎಮ್ಮೆ ಇತ್ಯಾದಿಗಳನ್ನು ಐದು ಮಂದಿ ಕೂಡಿ ಪರಿಹರಿಸಬಹುದು. ದುರ್ಜನನನ್ನು ಸ್ಥಾನತ್ಯಾಗದಿಂದಲೇ ಪರಿಹರಿಸಬಹುದು. (ದುರ್ಜನನ ಹತ್ತಿರದ ನಿವಾಸವನ್ನು ತ್ಯಜಿಸಿಯೇ ಆದರಿಂದ ಪಾರಾಗಬೇಕು.) ॥ ೨೮ ॥

ಆಪದರ್ಥೇ ಧನಂ ರಕ್ಷೇತ್ ದಾರಾನ್ ರಕ್ಷೇದ್ಧನೈರಪಿ ।
ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ ॥ ೨೯ ॥

ವಿಪತ್ತನ್ನು ಪರಿಹರಿಸುವುದಕ್ಕಾಗಿ ಧನವನ್ನು ಶೇಖರಿಸಬೇಕು. ಧನವ್ಯಯದಿಂದಲಾದರೂ ಹೆಂಡತಿಯರನ್ನು ರಕ್ಷಿಸಬೇಕು. ಹೆಂಡತಿಯರ

ಗಿಂತಲೂ ಧನಕ್ಕಿಂತಲೂ ಆತ್ಮವನ್ನು ಯಾವಾಗಲೂ ಸಂರಕ್ಷಿಸಬೇಕು. (ಆತ್ಮರಕ್ಷಣೆಯಿಂದಲೇ ಸರ್ವರಕ್ಷಣೆಯಾಗುವುದರಿಂದ ಆತ್ಮಾರ್ಥವಾಗಿಯೇ ಎಲ್ಲವೂ, ಎಂಬ ಭಾವ). ॥ ೨೯ ॥

ಪರದಾರಂ ಪರದ್ರವ್ಯಂ ಪರೀವಾದಂ ಪರಸ್ಯ ಚ ।
ಪರೀಹಾಸಂ ಗುರೋಃ ಸ್ಥಾನೇ ಚಾಪಲ್ಯಂ ಚ ವಿವರ್ಜಯೇತ್ ॥ ೩೦ ॥

ಪರಸ್ತ್ರೀಯನ್ನು, ಪರಧನವನ್ನು, ಪರನಿಂದೆಯನ್ನು, ಪರಿಹಾಸ ವನ್ನು ಹಾಗೆಯೇ ಪಿತ್ರಾದಿ ಗುರುಗಳ ಸ್ಥಾನದಲ್ಲಿ ಚಾಪಲ್ಯವನ್ನು (ಪ್ರಾಗಲ್ಭತೆಯನ್ನು) ತ್ಯಜಿಸತಕ್ಕದ್ದು. ॥ ೩೦ ॥

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥ ೩೧ ॥

ವಂಶದ ರಕ್ಷಣೆಗಾಗಿ ದ್ರವ್ಯವನ್ನು ತ್ಯಜಿಸಬೇಕು. ಗ್ರಾಮದ ಜನರಿಗಾಗಿ ಗ್ರಾಮವನ್ನು (ದೇಶರಕ್ಷಣೆಗೆ ಹೋಗಲು) ತ್ಯಜಿಸಬೇಕು. ಆತ್ಮಾರ್ಥವಾಗಿ ಸರ್ವವನ್ನೂ ತ್ಯಜಿಸಬೇಕು. ॥ ೩೧ ॥

ಚಲತ್ಯೇಕೇನ ಪಾದೇನ ತಿಷ್ಠತ್ಯೇಕೇನ ಬುದ್ಧಿಮಾನ್ ।
ನಾ ಸಮೀಕ್ಷ್ಯ ಪರಂ ಸ್ಥಾನಂ ಪೂರ್ವಮಾಯತನಂ ನ ತ್ಯಜೇತ್ ॥ ೩೨ ॥

ಬುದ್ಧಿವಂತನು ಒಂದು ಕಾಲಿನಿಂದ ನಡೆದು, ತನ್ನ ಇನ್ನೊಂದು ಕಾಲಿನಿಂದ ನಿಂತು ಇರುತ್ತಾನೆ. (ಸ್ಥಾನದ ತ್ಯಾಗವನ್ನೂ ಅತ್ಯಾಗವನ್ನು ಅತನು ವಿವೇಚಿಸುತ್ತಾನೆ, ಎಂಬರ್ಥ] ಏಕೆಂದರೆ, ಅನ್ಯಸ್ಥಾನವನ್ನು ನೋಡದೆಯೇ (ಸದಸತ್ ವಿಚಾರಿಸಿ ಎಂದು ಶೇಷ) ಪೂರ್ವಸ್ಥಾನವನ್ನು ಬಿಡಬಾರದು. ॥ ೩೨ ॥

ಲುಬ್ಧಮರ್ಥೇನ ಗೃಹ್ಣೀಯಾತ್ ಕ್ರುದ್ಧಮಂಜಲಿಕರ್ಮಣಾ ।
ಮೂರ್ಖಂ ಛನ್ದೋಽನುವೃತ್ತೇನ ತಥಾ ತಥ್ಯೇನ ಪಂಡಿತಮ್ ॥ ೩೩ ॥

ಧನದಿಂದ ಲೋಭಿಯನ್ನು ವಶೀಕರಿಸಬೇಕು. ಕೋಪಗೊಂಡವನನ್ನು ನಮಸ್ಕರಿಸಿ ವಶಪಡಿಸಬೇಕು. ಮೂರ್ಖನನ್ನು ಅವನ ಮನೋ

ವೃತ್ತಿಯಂತೆ ಕಾರ್ಯಗಾಗಿಸಿ ವಶೀಕರಿಸಬೇಕು. ಸತ್ಯದಿಂದ ಜ್ಞಾನಿಯನ್ನು ವಶೀಕರಿಸಬೇಕು. ॥ ೩೩ ॥

ಅರ್ಥನಾಶಂ ಮನಸ್ತಾಪಂ ಗೃಹೇ ದುಶ್ಚರಿತಾನಿ ಚ ।
ವಂಚನಂ ಚಾಪಮಾನಂ ಚ ಮತಿಮಾನ್ ನ ಪ್ರಕಾಶಯೇತ್ ॥ ೩೪ ॥

ಬುದ್ಧಿವಂತನು ತನಗೆ ಸಂಭವಿಸಿದ ಧನನಾಶವನ್ನೂ ಮನೋದುಃಖವನ್ನೂ ಮನೆಯಲ್ಲಿ ಆಗುವ ದುರಾಚಾರಗಳನ್ನೂ ತನಗಾದ ವಂಚನೆಯ ವಿಚಾರವನ್ನೂ ಅಪಮಾನ ವಿಚಾರವನ್ನೂ ಪ್ರಕಟಿಸಬಾರದು. (ಇವನ್ನೆಲ್ಲಾ ಇತರರಿಗೆ ತಿಳಿಸಿದರೆ ತನಗೇ ಅಗೌರವಕ್ಕೆ ಆಸ್ಪದವಾಗುವುದು ಎಂಬರ್ಥ). ॥ ೩೪ ॥

ಧನಧಾನ್ಯ ಪ್ರಯೋಗೇಷು ತಥಾ ವಿದ್ಯಾಗಮೇಷು ಚ ।
ಆಹಾರೇ ವ್ಯವಹಾರೇ ಚ ತ್ಯಕ್ತಲಜ್ಜಃ ಸದಾ ಭವೇತ್ ॥ ೩೫ ॥

ಹಣಕಾಸು—ದವಸಧಾನ್ಯಗಳ ಪ್ರಯೋಜನಗಳಲ್ಲೂ (ಸಾಲ, ದಾನಾದಿ ವ್ಯವಹಾರಗಳಲ್ಲೂ) ವಿದ್ಯೋಪಾರ್ಜನೆಯಲ್ಲೂ, ಭೋಜನದಲ್ಲೂ, ವ್ಯಾಪಾರದಲ್ಲೂ, ಯಾವಾಗಲೂ ಲಜ್ಜೆಯನ್ನು ತ್ಯಜಿಸಬೇಕು. ಏಕೆಂದರೆ ನಾಚಿಕೆಯಿಂದ ಇಂಥ ವ್ಯವಹಾರಗಳಲ್ಲಿ ಹಾನಿಯುಂಟೆಂಬರ್ಥ. ॥ ೩೫ ॥

ಧನಿನಃ ಶ್ರೋತ್ರಿಯೋ ರಾಜಾ ನದೀ ವೈದ್ಯಸ್ತು ಪಂಚಮಃ ।
ಪಂಚ ಯತ್ರ ನ ವಿದ್ಯಂತೇ ತತ್ರ ವಾಸಂ ನ ಕಾರಯೇತ್ ॥ ೩೬ ॥

ಧನವಂತರು, ಬ್ರಾಹ್ಮಣರು, ಅರಸರು, ನದಿಯು ಹಾಗೂ ವೈದ್ಯನು—ಈ ಐದಿಲ್ಲದಿದ್ದ ಪ್ರದೇಶದಲ್ಲಿ ನಿವಾಸಿಸಕೂಡದು. (ಗೃಹಸ್ಥರಿಗೆ ಹಣದ ಆವಶ್ಯಕತೆಯಿದ್ದಾಗ ಧನಿಕರಿಂದ ಪಡೆಯಬಹುದು. ಜ್ಞಾನವು ಎಲ್ಲರಿಗೆ ಅಗತ್ಯವಿದ್ದು ಅದನ್ನು ಬ್ರಾಹ್ಮಣರಿಂದ ಅರಿತುಕೊಳ್ಳಬಹುದು. ವಿವಾದಾದಿಗಳನ್ನು ಅರಸನು ಹೋಗಲಾಡಿಸುವನು. ನದಿಯಿಂದ ಮಳೆಯಿಲ್ಲದಿರುವಾಗಲೂ ಕೃಷಿವಾಣಿಜ್ಯಗಳಿಗೆ ಸೌಲಭ್ಯವಿದೆ. ರೋಗರುಜೆಗಳನ್ನು ಚಿಕಿತ್ಸಕನು ಗುಣಪಡಿಸುವನು.) ಹೀಗೆ ಅವೆಲ್ಲ ಇರುವಲ್ಲಿ ಜೀವನವು ಸುಗಮವಾಗುವುದು. ॥ ೩೬ ॥

ಯಸ್ಮಿನ್ ದೇಶೇ ನ ಸನ್ಮಾನಂ ನ ಪ್ರೀತಿರ್ನಚ ಬಾಂಧವಾಃ ।
ನ ಚ ವಿದ್ಯಾಗಮಃ ಕಶ್ಚಿತ್ ತಂದೇಶಂ ಪರಿವರ್ಜಯೇತ್ ॥ ೩೭ ॥

ಯಾವ ದೇಶದಲ್ಲಿ ಸನ್ಮಾನವಿಲ್ಲವೋ, ಸಂತೋಷವಿಲ್ಲವೋ, ಬಾಂಧವರಿಲ್ಲವೋ, ಯಾವೊಂದು ವಿದ್ಯೋಪಾರ್ಜನೆಯ ಸಾಧನಗಳಿಲ್ಲವೋ ಅಂಥ ದೇಶವನ್ನು ಪರಿತ್ಯಜಿಸಬೇಕು. ॥ ೩೭ ॥

ಮನಸಾ ಚಿಂತಿತಂ ಕರ್ಮ ವಚಸಾ ನ ಪ್ರಕಾಶಯೇತ್ ।
ಅನ್ಯಲಕ್ಷಿತ ಕಾರ್ಯಸ್ಯ ಯತಃ ಸಿದ್ಧಿರ್ನ ಜಾಯತೇ ॥ ೩೮ ॥

ಮನಸ್ಸಿನಲ್ಲಿ ನಿರ್ಣಯಿಸಿದ ಕೆಲಸವನ್ನು ಮಾತುಗಳಿಂದ ಪ್ರಕಟಿಸಬಾರದು; ಏಕೆಂದರೆ ಇತರರಿಂದ ಲಕ್ಷಿಸಲ್ಪಟ್ಟ ಕಾರ್ಯದ ಸಿದ್ಧಿಯಾಗುವುದಿಲ್ಲ. ॥ ೩೮ ॥

ಕುದೇಶಶ್ಚ ಕುವೃತ್ತಿಶ್ಚ ಕುಭಾರ್ಯಾಂ ಕುನದೀಂ ತಥಾ ।
ಕುದ್ರವ್ಯಂಚ ಕುಭೋಜ್ಯಂ ಚ ವರ್ಜಯೇತ್ ತು ವಿಚಕ್ಷಣಃ ॥ ೩೮ ॥

ಪ್ರಾಜ್ಞನು ದುಷ್ಟ ದೇಶವನ್ನು, ಕೆಟ್ಟ ವೃತ್ತಿಯನ್ನು (ಕುತ್ಸಿತ ಜೀವಿಕೆಯನ್ನು), ದುಷ್ಟ ಹೆಂಡತಿಯನ್ನು, ಭೀಕರ ನೆರೆಬರುವ ನದಿಯನ್ನು, ಕುದ್ರವ್ಯವನ್ನು, ಕೆಟ್ಟ ಆಹಾರವನ್ನು ನಿಶ್ಚಯವಾಗಿ ತ್ಯಜಿಸತಕ್ಕದ್ದು. ॥೩೯॥

ಋಣಶೇಷೋಽಗ್ನಿ ಶೇಷಶ್ಚ ವ್ಯಾಧಿಶೇಷಸ್ತಥೈವ ಚ ।
ಪುನಶ್ಚ ವರ್ಧತೇ ಯಸ್ಮಾತ್ತಸ್ಮಾತ್ ಶೇಷಂ ಹಿ ಕಾರಯೇತ್ ॥ ೪೦ ॥

ಸಾಲದ ಶೇಷಾಂಶವನ್ನು, ಅಗ್ನಿಶೇಷವನ್ನು, ರೋಗದ ಶೇಷವನ್ನು, ಅವು ಮರಳಿ ಪ್ರವರ್ಧಿಸಬಹುದಾದ ಕಾರಣ ಅವುಗಳನ್ನು ಆಮೂಲಾಗ್ರವಾಗಿ ಇರಗೊಡಿಸಬಾರದು. ॥ ೪೦ ॥

ಚಿಂತಾಜ್ವರೋ ಮನುಷ್ಯಾಣಾಂ ವಸ್ತ್ರಾಣಾಮಾತಪೋಜ್ವರಃ ।
ಅಸೌಭಾಗ್ಯಂ ಜ್ವರಃ ಸ್ತ್ರೀಣಾಮಶ್ವಾನಾಂ ಮೈಥುನಂ ಜ್ವರಃ ॥ ೪೧ ॥

ಚಿಂತೆ ಎಂಬುದು ಮನುಷ್ಯರಿಗೆ ಜ್ವರಸಮಾನ ಹಾನಿಕಾರಕವು; ಬಿಸಿಲು ಬಟ್ಟೆಗಳಿಗೆ ಜ್ವರದಂತಿದೆ; ಅಪ್ರಿಯನಾದ ಪತಿಯು ಸ್ತ್ರೀಯರಿಗೆ;

ಮೈಥುನವು ಕುದುರೆಗಳಿಗೆ ಜ್ವರಪ್ರಾಯವಾಗಿವೆ. ತಾತ್ಪರ್ಯವೇನೆಂದರೆ ಚಿಂತಾದಿಗಳಿಂದ ಇವು ಕೆಡುತ್ತವೆಂದು. ॥ ೪೧ ॥

ಅಸ್ತಿ ಪುತ್ರೋ ವಶೇ ಯಸ್ಯ ಭೃತ್ಯೋ ಭಾರ್ಯಾ ತಥೈವ ಚ ।
ಅಭಾವೇ ಸತಿ ಸಂತೋಷಃ ಸ್ವರ್ಗಸ್ಥೋಽಸೌ ಮಹೀತಲೇ ॥ ೪೨ ॥

ಮಗನು, ಹೆಂಡತಿಯು, ಸೇವಕನು ಯಾವನ ಆಜ್ಞಾಕಾರಿಯಾಗಿದ್ದಾರೋ, ಯಾವನಿಗೆ ಅಭಾವವಿದ್ದರೂ ಸಂತುಷ್ಟನಾಗಿದ್ದಾನೋ, ಅಂಥವನು ಭೂಮಿಯಲ್ಲಿದ್ದರೂ ಸ್ವರ್ಗದಲ್ಲಿರುವಷ್ಟು ಸುಖಿಯಾಗಿರುತ್ತಾನೆ. ॥ ೪೨ ॥

ದುಷ್ಟಾ ಭಾರ್ಯಾ ಶಠಂ ಮಿತ್ರಂ ಭೃತ್ಯಶ್ಚೋತ್ತರದಾಯಕ ।
ಸಸರ್ಪೇ ಚ ಗೃಹೇ ವಾಸೋ ಮೃತ್ಯುರೇವ ನ ಸಂಶಯಃ ॥ ೪೩ ॥

ವ್ಯಭಿಚಾರಾದಿ ದೋಷವುಳ್ಳ ಹೆಂಡತಿಯು, ದುಷ್ಟನಾದ ಸ್ನೇಹಿತನು, ಪ್ರತ್ಯುತ್ತರ ಕೊಡುವ ಸೇವಕನು, ಸರ್ಪಯುಕ್ತವಾದ ಮನೆಯಲ್ಲಿ ವಾಸಿಸುವುದು ಇವೆಲ್ಲವೂ ಮರಣಕಾರಕವಾಗಿರುವುದರಲ್ಲಿ ಸಂದೇಹವಿಲ್ಲ ॥ ೪೩ ॥

ಮಾತಾ ಯಸ್ಯ ಗೃಹೇ ನಾಸ್ತಿ ಭಾರ್ಯಾ ಚಾ ಪ್ರಿಯವಾದಿನೀ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಮ್ ॥ ೪೪ ॥

ಯಾರ ಮನೆಯಲ್ಲಿ ಹೆತ್ತ ತಾಯಿಯಿರುವುದಿಲ್ಲವೊ, ಹೆಂಡತಿಯು ಅಪ್ರಿಯವನ್ನೇ ಮಾತನಾಡುತ್ತಿರುವಳೋ, ಅಂಥ ಪುರುಷನು ಕಾಡನ್ನು ಸೇರುವುದು ಉತ್ತಮ. ಏಕೆಂದರೆ ಅವನ ಗೃಹವು ಅರಣ್ಯದಂತಿದ್ದು, ಗೃಹವಾಸಕ್ಕಿಂತಲೂ ಅರಣ್ಯವಾಸವೇ ಮೇಲು ಎಂಬ ಭಾವ ॥ ೪೪ ॥

ಋಣಕರ್ತಾ ಪಿತಾ ಶತ್ರುರ್ಮಾತಾ ಚ ವ್ಯಭಿಚಾರಿಣೀ ।
ಭಾರ್ಯಾ ರೂಪವತೀ ಶತ್ರುಃ ಪುತ್ರಃ ಶತ್ರು ನ ಪಂಡಿತಃ ॥ ೪೫ ॥

ಸಾಲಮಾಡುವ ತಂದೆಯು ಪುತ್ರನಿಗೆ ಶತ್ರುವು; ವ್ಯಭಿಚಾರಿಯಾದ ತಾಯಿಯು ಮಗನಿಗೆ ಶತ್ರುವು; ರೂಪವತಿಯಾದ ಹೆಂಡತಿಯು ಪತಿಗೆ ಶತ್ರುವು; ಮೂರ್ಖನಾದ ಮಗನು ತಂದೆಗೆ ಶತ್ರುಪ್ರಾಯನು. ॥ ೪೫ ॥

ಕೋಕಿಲಾನಾಂ ಸ್ವರೋ ರೂಪಂ ನಾರೀರೂಪಂ ಪತಿವ್ರತಾ ।
ವಿದ್ಯಾ ರೂಪಂ ಕುರೂಪಾಣಾಂ ಕ್ಷಮಾರೂಪಂ ತಪಸ್ವಿನಾಂ ॥ ೪೬ ॥

ಕೋಗಿಲೆಗೆ ಅದರ ಮಧುರ ಸ್ವರವೇ ರೂಪವು; ಪಾತಿವ್ರತ್ಯವೇ ಸ್ತ್ರೀಯರಿಗೆ ಭೂಷಣವು; ವಿದ್ಯೆಯು ಕುರೂಪಿಗಳಿಗೆ ಅಲಂಕಾರವು; ಕ್ಷಮೆಯೇ ತಪಸ್ವಿಗಳಿಗೆ ಸೌಂದರ್ಯವು. ॥ ೪೬ ॥

ಅವಿದ್ಯಂ ಜೀವನಂ ಶೂನ್ಯಂ ದಿಕ್ ಶೂನ್ಯಾ ಭೇದಬಾಂಧವಾಃ ।
ಪುತ್ರಹೀನಂ ಗೃಹಂ ಶೂನ್ಯಂ ಸರ್ವಶೂನ್ಯಾ ದರಿದ್ರತಾ ॥ ೪೭ ॥

ವಿದ್ಯಾಹೀನ ಜೀವನವು ನಿಷ್ಫಲವು; ಬಂಧುಜನರಿಲ್ಲದ ದೇಶವು ಅಗಮ್ಯವೂ ಅನಾಶ್ರಯಣೀಯವೂ ಆಗಿರುತ್ತದೆ. ಮಗನಿಲ್ಲದ ಮನೆಯು ತಂದೆಗೆ ಶೂನ್ಯವು; ದರಿದ್ರನಿಗೆ ಸರ್ವವೂ ಶೂನ್ಯವಾಗಿದೆ ॥ ೪೭ ॥

ಅದಾತಾ ವಂಶದೋಷೇಣ ಕರ್ಮದೋಷಾದ್ದರಿದ್ರತಾ ।
ಉನ್ಮಾದೋ ಮಾತೃದೋಷೇಣ ಪಿತೃದೋಷೇಣ ಮೂರ್ಖತಾ ॥ ೪೮ ॥

ವಂಶದೋಷದಿಂದ ಜಿಪುಣತೆಯು, ಯಥಾಕಾಲದಲ್ಲಿ ವಿದ್ಯಾದಿ ಶಿಕ್ಷಣ ಕರ್ಮವಿರಹಿತೆಯಿಂದ ನಿರ್ಧನತೆಯೂ (ಬಡತನವೂ) ಮಾತೆಯ ದೋಷದಿಂದ (ಗರ್ಭಾವಸ್ಥೆಯಲ್ಲಿ ವಾಯುರೋಗಾವಿರ್ಭಾವದಿಂದ ಎಂಬ ಭಾವ) ಉನ್ಮಾದವೂ (ಹುಚ್ಚು), ಪಿತೃದೋಷದಿಂದ (ಎಂದರೆ ತಂದೆಯು ಸರಿಯಾದ ಶಿಕ್ಷಣ ಕೊಡದಿರುವುದರಿಂದ) ಮೂರ್ಖತೆಯೂ ಪ್ರಾಪ್ತವಾಗುತ್ತದೆ. ॥ ೪೮ ॥

ಗುರುರಗ್ನಿರ್ದ್ವಿಜಾತೀನಾಂ ವರ್ಣಾನಾಂ ಬ್ರಾಹ್ಮಣೋಗುರುಃ ।
ಪತಿರೇಕೋ ಗುರುಃ ಸ್ತ್ರೀಣಾಂ ಸರ್ವತ್ರಾಭ್ಯಾಗತೋ ಗುರುಃ ॥ ೪೯ ॥

ಅಗ್ನಿಯು ದ್ವಿಜಾತಿ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಗುರುವಾಗಿದ್ದಾನೆ. ಇವರು ಅಗ್ನಿಹೋತ್ರಾದಿವಿಧಾನಗಳಿಂದ ಅಗ್ನಿಯ ಸೇವೆಯನ್ನು ಮಾಡತಕ್ಕದ್ದು. ಬ್ರಾಹ್ಮಣನು ಚಾತುರ್ವರ್ಣದವರಿಗೆಲ್ಲಾ ಗುರುವು, ಎಂದರೆ ಶಿಕ್ಷಕನು. ತನ್ನ ಗಂಡನೇ ಹೆಂಡತಿಗೆ ಗುರುವು; ಸರ್ವರಿಗೂ ಅತಿಥಿಯು ಗುರುವಾಗಿದ್ದಾನೆ. ॥ ೪೯ ॥

ಅತಿದರ್ಪೇ ಹತಾ ಲಂಕಾ ಅತಿಮಾನೇ ಚ ಕೌರವಾಃ ।
ಅತಿದಾನೇ ಬಲಿರ್ಬದ್ಧಃ ಸರ್ವಮತ್ಯಂತ ಗರ್ಹಿತಂ ॥ ೫೦ ॥

ಅತಿ ಅಹಂಕಾರದಿಂದಾಗಿ ಲಂಕೆಯು ನಾಶವಾಯಿತು. ಕುರುವಂಶೀಯರು (ದುರ್ಯೋಧನಾದಿಗಳು) ಅತಿಶಯವಾದ ಅಹಂಕಾರದ್ದಿಂದ ನಾಶವಾದರು. ಬಲಿಚಕ್ರವರ್ತಿಯು ಅತಿದಾನದಿಂದ (ವಾಮನರೂಪಿಯಾದ ಹರಿಯಿಂದ ದಾನಕೇಳಲ್ಪಟ್ಟು) ಬಂಧನಕ್ಕೊಳಗಾದನು. ಸರ್ವ ವಿಚಾರದಲ್ಲಿಯೂ ಮಿತಿಗೆಟ್ಟ ಅತಿಯು ನಾಶಕಾರಕವು. ಆದುದರಿಂದ "ಅತಿ ಸರ್ವತ್ರ ವರ್ಜಯೇತ್"—ಎಲ್ಲಾ ವಿಚಾರದಲ್ಲಿಯೂ ಅತಿಯಾಗಿರುವುದನ್ನು ತ್ಯಜಿಸಬೇಕೆಂದು ನಾಣ್ಣುಡಿಯು. ॥ ೫೦ ॥

ವಸ್ತ್ರಹೀನಸ್ತ್ವಲಂಕಾರೋ ಘೃತಹೀನಂಚ ಭೋಜನಂ ।
ಸ್ತನ ಹೀನಾಂಚ ಯಾ ನಾರೀ ವಿದ್ಯಾಹೀನಂ ಚ ಜೀವನಂ ॥ ೫೧ ॥

ವಸ್ತ್ರವಿಲ್ಲದೆ ಶರೀರವು ಶೋಭಿಸುವುದಿಲ್ಲ. ಹಾಗೆಯೇ ತುಪ್ಪವಿಲ್ಲದ ಭೋಜನವು, ಸ್ತನವಿಲ್ಲದ ನಾರಿಯು ಮತ್ತು ವಿದ್ಯಾಹೀನವಾದ ಜೀವನವು ಶೋಭಿಸುವುದಿಲ್ಲ. ॥ ೫೧ ॥

ಭೋಜ್ಯಂ ಭೋಜನಂ ತಕ್ತಿಶ್ಚ ರತಿಶಕ್ತಿರ್ವರಾಃ ಸ್ತ್ರೀಯಃ ।
ವಿಭವೋ ದಾನಶಕ್ತಿಶ್ಚ ನಾಲ್ಪಸ್ಯ ತಪಸಃ ಫಲಂ ॥ ೫೨ ॥

ಆಹಾರಗಳಲ್ಲಿರುವ ಶಾರೀರಿಕ, ಪೌಷ್ಠಿಕಶಕ್ತಿ, ಉತ್ತಮ ಸ್ತ್ರೀಯರಲ್ಲಿ ಇರುವ ರತಿಶಕ್ತಿ, ವೈಭವ ಅಥವಾ ಸಂಪತ್ತು, ದಾನಶಕ್ತಿ, ಇವು ಅಲ್ಪವಾದ ತಪಸ್ಸಿನಿಂದ ಪ್ರಾಪ್ತವಾಗುವುದಿಲ್ಲ. ॥ ೫೨ ॥

ಪುತ್ರ ಪ್ರಯೋಜನಾ ದಾರಾಃ ಪುತ್ರಃ ಪಿಂಡಪ್ರಯೋಜನಃ ।
ಹಿತ ಪ್ರಯೋಜನಂ ಮಿತ್ರಂ ಧನಂ ಸರ್ವಪ್ರಯೋಜನಂ ॥ ೫೩ ॥

ಹೆಂಡತಿಯು ಪುತ್ರರನ್ನು ಪಡೆಯುವುದಕ್ಕಾಗಿರುವಳು; ಪುತ್ರರು ಪಿಂಡದಾನಕ್ಕಾಗಿ ಇರುತ್ತಾರೆ ಮಿತ್ರರು ಹಿತಾನುಷ್ಠಾನಕ್ಕಾಗಿರುವರು. ಧನವು ಎಲ್ಲ ಕಾರ್ಯಗಳಲ್ಲಿ ಉಪಯೋಗಕ್ಕೆ ಬರುತ್ತದೆ. ॥ ೫೩ ॥

ದುರ್ಲಭಂ ಪ್ರಾಕೃತಂ ವಾಕ್ಯಂ ದುರ್ಲಭಃ ಕ್ಷೇಮಕೃತ್ ಸುತಃ ।
ದುರ್ಲಭಾ ಸದೃಶೀ ಭಾರ್ಯಾ ದುರ್ಲಭಃ ಸ್ವಜನಃ ಪ್ರಿಯಃ ॥ ೫೪ ॥

ಸತ್ಯವಾಕ್ಯವು ದುರ್ಲಭ. ಶುಭವನ್ನು ಮಾಡುವ ಪುತ್ರನು ದುರ್ಲಭನು. ಆತ್ಮಾನುರೂಪಿ ಅತ್ಯಂತ ಪ್ರೀತಿಮಾಡುವ ಹೆಂಡತಿಯು ದುರ್ಲಭಳು. ಆತ್ಮೀಯನು ದುರ್ಲಭನು. (ಕೆಲವು ಚಾಣಕ್ಯಶತಕಪಾಠಗಳಲ್ಲಿ ಈ ಶ್ಲೋಕದಲ್ಲಿ 'ವಾಕ್ಯಂ' ಶಬ್ದದ ಬದಲಾಗಿ 'ಮಿತ್ರಂ' ಇದೆ-ನಿಜವಾದ ಮಿತ್ರನು ದುರ್ಲಭನು). ॥ ೫೪ ॥

ಶೈಲೇ ಶೈಲೇ ನಮಾಣಿಕ್ಯಂ ಮೌಕ್ತಿಕಂ ನಗಜೇಗಜೇ ।
ಸಾಧವೋ ನಹಿ ಸರ್ವತ್ರ ಚಂದನಂ ನವನೇವನೇ ॥ ೫೫ ॥

ಪ್ರತಿ ಪರ್ವತದಲ್ಲಿ ಮಾಣಿಕ್ಯರತ್ನವಿಲ್ಲ.
ಪ್ರತಿ ಆನೆಯಲ್ಲಿ ಮುತ್ತು ಇರುವುದಿಲ್ಲ.
ಪ್ರತಿ ಕಾಡಿನಲ್ಲಿ ಚಂದನ ಮರಗಳಿರುವುದಿಲ್ಲ.
ಸಜ್ಜನರು ಎಲ್ಲ ಕಡೆಗಳಲ್ಲಿ ಇರುವುದಿಲ್ಲ.

ಪ್ರಥಮ ಭಾಗ ಸಮಾಪ್ತವು.

— 'ಒಂದಾಣೆ ಮಾಲೆ'ಯು 149ನೇ ಪುಸ್ತಕ —

ಚಾಣಕ್ಯ ಶತಕ

(ಭಾಗ ೨— ಕನ್ನಡ ಅರ್ಥ ಸಹಿತ)

(ಅನುವಾದಕರು: **ಡಾ| ಟಿ. ಪಿ. ಭಟ್**)

'ಚಾಣಕ್ಯ ಶತಕ'ವು, "ಒಂದಾಣೆ ಮಾಲೆ"ಯು 148ನೇ ಮತ್ತು 149ನೇ ಪುಸ್ತಕಗಳಾಗಿ (ಭಾಗ ೧ ಮತ್ತು ೨), ಎರಡೇ ಪುಸ್ತಕಗಳಲ್ಲಿ ಪೂರ್ಣವಾಗಿರುತ್ತದೆ.

ಈ ಅಮೂಲ್ಯ ಪುಸ್ತಕವನ್ನು ಸಂಗ್ರಹಿಸುವವರಿಗೆ ಅನುಕೂಲವಾಗುವಂತೆ ಇವೆರಡೂ ಭಾಗಗಳು ಒಮ್ಮೆಗೇ ದೊರೆವುವು. ಆದುದರಿಂದ 148ನೇ ಪುಸ್ತಕ ಕೊಂಡುಕೊಳ್ಳುವಾಗ 149ನೇ ಪುಸ್ತಕವನ್ನೂ ಕೇಳಿ ಕೊಂಡುಕೊಳ್ಳಿರಿ.

ಪ್ರತಿಯೊಂದಕ್ಕೂ ಒಂದಾಣೆ.

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ನ್ಯೂಸ್ ಏಜಂಟರಲ್ಲೂ ದೊರೆವುದು.

ಅಥವಾ

ಒಂದಾಣೆ ಮಾಲೆ, ಪ್ರಭಾತ ಆಫೀಸು,

ರಥಬೀದಿ, ಮಂಗಳೂರು-1.

Edited, Printed & Published by K. V. Shenoy
at the Prabhat Printers, Ltd., Mangalore.